Regd No BG 155 12-9-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಸುನೆ ಸಿರಸ್ತೇದಾರ್ ಎಂ ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಪ್ರಧಾನರಿಗೆ ನಿರ್ಬಂಧ ಇರಕೂಡದು

36000 ಪ್ರೇಕ್ಷಕರು

ಬೆಲ್ಫಾಸ್ಟ್— ವಿಶ್ವ ಕಾಲ್ಚೆಂಡ್ ಬಟ್ಟಲಾ ಸಂಘದಲ್ಲಿ ಐರ್ಲೆಂಡು ಮತ್ತು ರಷ್ಯಗಳ ನಡುವೆ ಆಟದಲ್ಲಿ 0-0 ಗೋಲುಗಳಿಂದ ಸಮವಾಯಿತು – 36000 ಪ್ರೇಕ್ಷಕರಿದ್ದರು.

"ಸತ್ಯವಾದಿ" ಯ ಸ್ವರ್ಣೋತ್ಸವ

ಭಾನುವಾರ **28-9-1969**

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ. ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನಸೆರವನ್ನೂ ಉದಾರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ತತ್ಕೃಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಜಪುರಂ, ಮೈಸೂರು 4.

ಪ್ರಧಾನಿಗಳಿಗೆ ನಿರ್ಬಂಧ ಕೂಡದು

ಪಾಟ್ನಾ— ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ– ಕೆಲವು ನಿಬಂಧನೆಗೊಳಗಾಗಿ ತಾವು ಪ್ರಧಾನಿಯಾಗಿರಬಹುದೆಂದು ಕೆಲವು ನಾಯಕರು ಹೇಳುತ್ತಿರುವುದು ತೀವ್ರ ಅಪಮಾನಕರವೆಂದು ತಾವು ಭಾವಿಸಿರುವುದಾಗಿ ಪ್ರಧಾನಿ ಇಂದಿರಾರವರು ಗುಡುಗಿದರು ; ಆ ನಾಯಕರ ಹೆಸರನ್ನು ಅವರು ತಿಳಿಸಲಿಲ್ಲ – ಮುಖವನ್ನು ಕೆಂಪು ಮಾಡಿಮಾಡಿಕೊಂಡು ತಾವು ನಿರ್ಬಂಧದಲ್ಲಿ ಪ್ರಧಾನಿಯಾಗಿರಲು ಸಿದ್ಧವಿಲ್ಲವೆಂದರು – ಈ ವಿಷಯದಲ್ಲಿ ತಾವು ಹೋರಾಡಬೇಕಾದೀತೆಂಬುದನ್ನು ಹೊರಪಡಿಸಿದರು.

ಶ್ರೀಮಾಲಿಯನರು ಕಾಶಿಗೆ

ನವಬಷಲಿ— ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿ ಡಾ ॥ ಶ್ರೀಮಾಲಿಯನರು ಕಾಶಿ ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿ ನೇಮಿಸಲ್ಪಟ್ಟಿದಾರೆ.

ಮದರಾಸು— ಜಾರ್ಜ್‌ಟೌನಿನಲ್ಲಿಯ ಮೂರು ಜನರಿಂದ ಕಸ್ಟಂಸ್ ಇಂಟೆಲಿಜೆನ್ಸಿನವರು ರೂ 142000 ಕಿಮ್ಮತ್ತಿನ ನೋಟುಗಳನ್ನು ವಶಪಡಿಸಿಕೊಂಡರು.

ಪರಿಸ್ಥಿತಿ ಶಾಂತಿಗೊಂಡಿತು

ಬೆಂಗಳೂರು— ವಿಶ್ವವಿದ್ಯಾಲಯ ಭಾಗದಲ್ಲಿ ಮತ್ತು ಸುತ್ತಮುತ್ತ ನಿನ್ನೆ ಶಾಂತತೆ ಇತ್ತು – ಕಾಲೇಜುಗಳನ್ನು ಮುಚ್ಚಿದ್ದುದು ಇದಕ್ಕೆ ಸಹಕಾರಿಯಾಗಿತ್ತು – ವಿದ್ಯಾರ್ಥಿ ನಾಯಕ ಗಂಗಾರಾಜ್ ಸೆಂಟ್ ಮಾರ್ಥಾ ಆಸ್ಪತ್ರೆಗೆ ಸೇರಿಸಲ್ಪಟ್ಟರು ; ಬಲಾತ್ಕಾರವಾಗಿ ಗ್ಲೂಕೋಸ್ ಇಂಜೆಕ್ಷನ್ ಕೊಟ್ಟದ್ದರಿಂದ ಉಸ್ತುವಾರಿ ನಿಲ್ಲಿಸಿದರು : ಚಳವಳಿವು ಕಾಲೇಜುಗಳು ತೆಗೆಯುವವರೆಗೆ ನಿಲ್ಲಿಸಲ್ಪಟ್ಟದ್ದು, ಈ ಕಾಲದಲ್ಲಿ ನಗರದ ನಾನಾ ಭಾಗಗಳಲ್ಲಿ ಬಹಿರಂಗ ಸಭೆಗಳನ್ನು ಏರ್ಪಡಿಸಲಾಗುವುದೆಂದು ಹೇಳಲಾಗಿದೆ.

ಕೃಷ್ಣಾ ಗೋದಾವರಿ ನೀರು

ಬೆಂಗಳೂರು— ಕೃಷ್ಣಾ ಗೋದಾವರಿ ಬೇಸಿನ್‌ಗಳಲ್ಲಿನ ನೀರಾವರಿ ಪ್ರಾಜೆಕ್ಟುಗಳನ್ನು ಬೇಗ ಮುಗಿಸಿ, ಅವುಗಳ ನೀರನ್ನು ನಾಲ್ಕನೇ ಯೋಜನೆಯ ಕಡೆಯೊಳಗೆ ಉಪಯೋಗಿಸಿಕೊಳ್ಳಲು ಸೌಕರ್ಯಗಳನ್ನು ಒದಗಿಸಿಕೊಳ್ಳುವಂತೆ ಸರ್ಕಾರವನ್ನು ಒತ್ತಾಯ ಮಾಡುವ ನಿರ್ಣಯವು ಶಾಸನ ಸಭೆಯಲ್ಲಿ ಮಂಜೂರಾಯಿತು.

ಜಲ ಅಂತರಾಳ ನಿವಾಸ

ಫ್ರೀಡೇರಿಜಿಷ್ಹಾಫೆನ್ (ಡಾಡ್)— ಇತ್ತೀಚೆಗೆ ಜರ್ಮನಿಯಲ್ಲಿ ಲೇಕ್ ಕಾನಸ್ಟೆನ್ಸಿನಲ್ಲಿ ನಡೆಸಿದ ಜಲಾಂತರಾಳ ನಿವಾಸ ಸಾಧನ ಪ್ರಯೋಗವು ಯಸಸ್ವಿಯಾಗಿದೆ : 6 ಮಿಟರು ಉದ್ದ 20 ಟನ್‌ಗಳ ಭಾರದ ಬಿಎಚ್-2 ಎಂಬ ಡೈವಿಂಗ್ ಸಾಧನದಲ್ಲಿ ಇಬ್ಬರು ಸಾಹಸಿಗಳು 10 ಮಿಟರ್ಸ್ ಗಳ ಆಳದಲ್ಲಿ 6 ದಿವಸ ಕಾಲ ತಳಭಾಗದಲ್ಲಿದ್ದು ಯಾವ ವಿಧದ ಅಪಾಯಕ್ಕಾಗಲೀ ಅನಾರೋಗ್ಯಕ್ಕಾಗಲೀ ಆಗಾಗದೆ ಮೇಲಕ್ಕೆ ಬಂದರು. (ಯು ಪಿ ಎಸ್)

ಸಹಿಸಂಗ್ರಹ

ಹೈದರಾಬಾದು— ಮುಖ್ಯ ಮಂತ್ರಿ ಶ್ರೀ ಬ್ರಹ್ಮಾನಂದ ರೆಡ್ಡಿಯವರ ರಾಜೀನಾಮೆಯ ಒತ್ತಾಯಕ್ಕಾಗಿ ಆಂಧ್ರ ಮತ್ತು ತೆಲಂಗಾಣಾ ಶಾಸಕರ ಎರಡು ತಂಡವು ಸಹಿಶೇಖರಣೆ ಮಾಡುತ್ತಿವೆ.

ಚಲಚ್ಚಿತ್ರದಲ್ಲಿ ಚುಂಬನಕ್ಕೆ ವಿರೋಧ

ಬೊಂಬಾಯಿ— ಭಾರತ ಸಿನಿಮೆಟೋಗ್ರಾಫ್ ಪ್ರದರ್ಶಕರು ಚಲಚಿತ್ರಗಳಲ್ಲಿ ಮುತ್ತಿಡುವದನ್ನು ಮತ್ತು ನಗ್ನತೆಯನ್ನು ವಿರೋಧಿಸಿದ್ದಾರೆ.

ತೀವ್ರ ಟೀಕೆ

ಬೆಂಗಳೂರು— ಖನಿಜ ಅಭಿವೃದ್ಧಿ ಮಂಡಲಿಯಿಂದಾಗಿರುವ ರೂ 165 ಲಕ್ಷ ನಷ್ಟದ ಬಗ್ಗೆ ಶಾಸನಸಭಾ ಪಬ್ಲಿಕ್ ಅಕೌಂಟ್ಸ್ ಸಮಿತಿ ತೀವ್ರವಾಗಿ ಟೀಕಿಸಿದೆ

ಉಪಾಧ್ಯಾಯರ ದಿನ

ಕಡಪ— ಶುಕ್ರವಾರ ಎಲ್ಲಾ ಪ್ರಾಥಮಿಕ ಮತ್ತು ಪೌಢ ಶಾಲೆಗಳ ವಿದ್ಯಾರ್ಥಿಗಳ ಮೆರವಣಿಗೆ ನಡೆಸಲಾಯಿತು.

ತಾ. 12-9-69 ನೇ ಶುಕ್ರವಾರದಿಂದ ಅಮೋಘ
.... ದಿನ 3 ಆಟಗಳು .... ಪ್ರಾರಂಭ
ಒಲಂಪಿಯಾ ಮತ್ತು ಶ್ರೀ ಚಿತ್ರಮಂದಿರಗಳಲ್ಲಿ
ದಿನ : 2-30, 6 ಮತ್ತು 9-30 ಕ್ಕೆ ದಿನ : 3, 6-30, 10 ಕ್ಕೆ
ಮೆಹಮೂದ್ ಭೀಮ್‌ಸಿಂಗ್ ಪ್ರೊಡಕ್ಷನ್ಸ್‌ರವರ
ಆತ್ಯುತ್ತಮ ಸಂಗೀತಭರಿತ, ಹಾಸ್ಯಮಯ ವರ್ಣರಂಜಿತ ಚಿತ್ರ
ನಾಧು ಔರ್ ಶೈತಾನ್
ಪಾತ್ರ : ಮೆಹಮೂದ್, ಭಾರತಿ, ಪ್ರಾಣ್, ಓಂಪ್ರಕಾಶ್, ಕಿಶೋರ್ ಕುಮಾರ್
ಸಂಗೀತ : ಲಕ್ಷ್ಮೀಕಾಂತ್ ಪ್ಯಾರೇಲಾಲ್ – ನಿರ್ದೇಶನ : ಎ. ಭೀಮ್‌ಸಿಂಗ್

ಗು ಲಾ ಬಿ

ಗುಲಾಬಿಯು ಮಧ್ಯಯುಗದಲ್ಲಿ ಭಾರತಕ್ಕೆ ಮುಸ್ಲಿಂರಿಂದ ಪರಿಚಯವಾದುದು ಎಂದು ಹೇಳಲಾಗಿದೆ. 16 ನೇ ಶತಮಾನದಲ್ಲಿನ ಅಕ್ಬರ್ ಚಕ್ರವರ್ತಿಯು ಒಂದು ಗುಲಾಬಿಯನ್ನು ತನ್ನ ಜೊತೆಯಲ್ಲಿಟ್ಟುಕೊಳ್ಳದೇ ಆಸ್ಥಾನಕ್ಕೆ ಬರುತ್ತಿರಲಿಲ್ಲವೆನ್ನಲಾಗಿದೆ. ತಾನು ಸ್ನಾನಮಾಡುವಾಗ ನೀರಿನಲ್ಲಿ ಹಾಕಲಾಗುತ್ತಿದ್ದ ಗುಲಾಬಿ ದಳಗಳಿಂದ ನೀರಿನಲ್ಲಿ ಎಣ್ಣೆ ಬೀಳುತ್ತಿದ್ದುದನ್ನು ಕಂಡ ನೂರ್‌ಜಹಾನಳು ಗುಲಾಬಿಯಿಂದ ಅದರ ಸಾರ ತೆಗೆಯಬಹುದೆಂದು ಕಂಡುಹಿಡಿದಳು– ಗುಲಾಬಿ ಅತ್ತರ್ ಉತ್ಪನ್ನವಾಯಿತು.

ವಿಶ್ವದಲ್ಲಿ ಅತ್ತರ್ ಉತ್ಪಾದಿಸುವ ಸ್ಥಳಗಳಲ್ಲಿ ಡೆಲ್ಲಿಯು ಒಂದಾಗಿದೆ. ಈಚೆಗೆ ಭಾರತದ ಪ್ರಪ್ರಥಮ ಗುಲಾಬಿ ಸಂಘ ಇಲ್ಲಿ ಸ್ಥಾಪಿತವಾಯಿತು. ಇತರ ಕಡೆಯಲ್ಲಿ– ಈ ಪೈಕಿ ಪೂನಾ ಒಂದು – ಗುಲಾಬಿ ಸಂಘಗಳು ತಮ್ಮ ವಾರ್ಷಿಕ ಪ್ರದರ್ಶನಗಳಲ್ಲಿ ಡಜ್ಜನ್‌ಗಟ್ಟಲೆ ವಿವಿಧ ಗುಲಾಬಿಗಳನ್ನು ಪ್ರದರ್ಶಿಸುತ್ತವೆ.

ಗುಲಾಬಿ ಶವದಗೆಟ್ಟಗೆಯಿಂದ ಗಾಜನಪದಾರ್ಥಗಳನ್ನು ಅಲಂಕರಿಸುತ್ತದೆ.

ರೋಮನ್ ಕ್ಲಿಯೊಪಾಟ್ರೆಳು ತನ್ನ ಪ್ರೇಮಿ ಆಂಥೊನಿಯನ್ನು ಸ್ವಾಗತಿಸಲು ಸಿಂಹಾಸನದ ಕೊಠಡಿಯಲ್ಲಿ ಹದಿನೆಂಟು ಅಂಗುಲ ದಪ್ಪದಷ್ಟು ಗುಲಾಬಿಗಳನ್ನು ಹರಡಿದ್ದಳು. ನೆಪೋಲಿಯನ್ ಪತ್ನಿ ಜೋಸೆಫೈನ್ ತನ್ನ ವಕ್ರ ಹಲ್ಲನ್ನು ಮುಚ್ಚಲು ಸದಾ ಗುಲಾಬಿ ಹೊಂದಿದ್ದಳು

ಭಾರತದ ಗುಲಾಬಿ ಪ್ರೇಮಿಗಳಲ್ಲಿ ಪ್ರಧಾನಿ ನೆಹ್ರೂ ಒಬ್ಬರಾಗಿದ್ದು ಯಾವಾಗಲೂ ತಮ್ಮ ಅಂಗಿ ಗುಂಡಿಕಾಜದಲ್ಲಿ ಗುಲಾಬಿ ಸಿಕ್ಕಿಸುತ್ತಿದ್ದರು. ಪಾಟಿಯಾಲಾ ಮಹಾರಾಜರೂ ಹೀಗೇ ಗುಲಾಬಿ ಪ್ರೇಮಿಗಳು.

---

4 ಕಂಭಗಳು

ಪಾಟ್ನಾ – ಪೋಸ್ಟ್, ಬಲತ್ಕಾರ, ಹೊಗಳಿಕೆ, ಸುಳ್ಳು ಈ 4 ಕಂಭಗಳ ಸಹಾಯದಿಂದ ಪ್ರಧಾನಮಂತ್ರಿಯವರು ಅಧಿಕಾರದಲ್ಲಿಮುಂದುವರಿಯುತ್ತಿರುವರೆಂದು ಎಸ್ಸೆಸ್ಪಿ ಪಾರ್ಲಿಮೆಂಟ್ ಸದಸ್ಯ ಶ್ರೀ ರಾಜ್ ನಾರಾಯಣ್ ಹೇಳಿದರು.

Quality Printing — Neat Binding

Lakshminarasimha Press

Sivarampet, Mysore

Help The Gorakshana



ಗೋರಕ್ಷಣೆ ಮತ್ತು ವ್ಯಾಪಕವಾದ ಕಾರ್ಯಗಳ ಹೆಚ್ಚಳಕ್ಕಾಗಿ ನಡೆಯಲಿ

ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

ಜಯಪ್ರದ 2ನೇ ವಾರ

ವುಡ್‌ಲ್ಯಾಂಡ್ ಶಿನ್

— ಅತ್ಯಾಕರ್ಷಣೀಯ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಸಾಜನ್ SAAJAN

ನಟವರ್ಗ— ಮನೋಜ್‌ಕುಮಾರ್, ಆಶಾ ಪರಾಖ್, ಓಂ ಪ್ರಕಾಶ್ ಮದನಪುರಿ, ಶಬ್‌ನಮ್

ನಿರ್ದೇಶನ : ಮೋಹನ್ ಸೇಗಾಲ್ ಸಂಗೀತ : ಲಕ್ಷ್ಮೀಕಾಂತ ಪ್ಯಾರೇಲಾಲ

[ದಿನ 3 ಪ್ರದರ್ಶನಗಳು]

ಅಪೆದಾ— ಅನೋಖ 2ನೇ ವಾರ

.... ಚಿತ್ರಾಕರ್ಷಕ ಈಸ್ಟ್‌ಮೆನ್ ಕಲರ್ ಹಿಂದಿ ಚಿತ್ರ ....

ಮಹಲ್

ಪಾತ್ರ— ದೇವಾನಂದ್, ಆಶಾ ಪರಾಖ್, ಅಭಿ ಭಟ್ಟಾಚಾರ್ಯ · ಡೇವಿಡ್, ಅಜ್ರಾ, ಸುಧೀರ್

ನಿರ್ದಿಗ್ದರ್ಶನ– ಶೇಖರ್ ಮುಖರ್ಜಿ ಸಂಗೀತ– ಕಲ್ಯಾಣ್‌ಜಿ ಆನಂದ್‌ಜಿ

ದಿನ 3 ಆಟಗಳು

Golden Jubilee of 'Satyavadi'

Sunday 28–9–1969

The President, the Prime Minister, H H. the Maharaja Mysore, and other personages have extended messages of felic tations and good wishes. Sri Sringeri and Sri Dwarak Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah Sri Madhav Shenoi. Sri Opera Talkies. Padmabhushana D M.C. Modi, Dr. R. S. Nanjunda Swamy (Glasgow) S. Ananthanarasimha Iyengar (Honganur) have generously exten ed donations and best wishes.

It iswelknown that golden jubilee of newspapers in Indi is rare and almost unknown in Mysore state. The Prim Minister has expressed that it is no small achievement.

Hearty cooperation, extending of messages and donation and gracing the occasion with presence, are fervently solicite with grateful thanks.

Editor, 'Satyavadi' Chamarajapuram, Mysore 4.

SHAKTI SUDHA

A Superb Tonic

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4